# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 958 |
| ಸದಸ್ಯರ ಹೆಸರು | : | ಶ್ರೀ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.02.2024 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ನಗರವು ಟ್ರಾಫಿಕ್ ಸಂಚಾರ ದಟ್ಟಣೆಯ ಪ್ರಮಾಣದಲ್ಲಿ ದೇಶದ 2ನೇ ನಗರವೆಂದು ಖಾಸಗಿ ಸಂಸ್ಥೆಯವರು ನಡೆಸಿದ ಸಮೀಕ್ಷೆಯ ವರದಿಯಲ್ಲಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರದ ನಿಲುವೇನು;</td><td>ಬಂದಿದೆ.<br>ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆಯನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td></tr>
<tr><td>ಆ)</td><td>ಈ ಸಂಚಾರ ದಟ್ಟಣೆ ಬಗ್ಗೆ ಸರ್ಕಾರವು ನೂತನವಾಗಿ ಯಾವ ಯಾವ ಯೋಜನೆಯನ್ನು ರೂಪಿಸಿದೆ;</td><td>ಅನುಬಂಧ-2ರಲ್ಲಿ ಒದಗಿಸಿದೆ.</td></tr>
<tr><td>ಇ)</td><td>ನಗರ ಸಂಚಾರ ದಟ್ಟಣೆ ನಿರ್ವಹಣೆಗೆ ಕಳೆದ ಮೂರು ವರ್ಷದಲ್ಲಿ ಆಗಿರುವ ವೆಚ್ಚ ಎಷ್ಟು? (ಠಾಣಾವಾರು ಮಾಹಿತಿ ನೀಡುವುದು)</td><td>ಬೆಂಗಳೂರು ನಗರ ಸಂಚಾರ ವಿಭಾಗಕ್ಕೆ ರಸ್ತೆ ಸುರಕ್ಷತಾ ನಿಧಿಯಿಂದ ಕಳೆದ ಮೂರು ವರ್ಷಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.<br><table><tr><th>ಕ್ರಮ ಸಂಖ್ಯೆ</th><th>ವರ್ಷ</th><th>ಅನುದಾನ ಬಿಡುಗಡೆಯಾದ ಮೊತ್ತ</th></tr><tr><td>1</td><td>2021-22</td><td>20,46,49,545-00</td></tr><tr><td>2</td><td>2022-23</td><td>63,85,29,613-00</td></tr><tr><td>3</td><td>2023-24</td><td>54,62,00,000-00</td></tr></table></td></tr>
</table>

**ಹೆಚ್‌ಡಿ 53 ಎಸ್‌ಎಸ್‌ಟಿ 2024**

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

## ಅನುಬಂಧ–1

ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಹೆಚ್ಚಿನ ಸಂಖ್ಯೆಯ ವಾಹನಗಳ ಪರಿಣಾಮವಾಗಿ ಸಂಚಾರ ದಟ್ಟಣೆಯು ಸಹ ಹೆಚ್ಚಾಗುತ್ತಿದ್ದು, ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಸಂಚಾರ ದಟ್ಟಣೆಯನ್ನು ತಿಳಿಗೊಳಿಸಲು ಬೆಂಗಳೂರು ನಗರ ಸಂಚಾರ ವಿಭಾಗದಿಂದ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತಿರುತ್ತದೆ, ವಿವರ ಈ ಕೆಳಕಂಡಂತಿವೆ.

1. ಅತಿ ಹೆಚ್ಚು ಸಂಚಾರ ದಟ್ಟಣೆ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಜಾರಿ(365 ರಸ್ತೆಗಳು)
2. ಪ್ರಮುಖ ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧ
3. ಬಲ ತಿರುವು ಮತ್ತು "ಯು" ತಿರುವುಗಳ ನಿಷೇಧ
4. ಸಂಚಾರ ನಿರ್ವಹಣಾ ಕೇಂದ್ರವನ್ನು ಸ್ಥಾಪಿಸಿದ್ದು, ಸುಗಮ ಸಂಚಾರಕ್ಕೆ ಅಗತ್ಯವಾದ ಕ್ರಮಗಳನ್ನು ನಿರ್ವಹಣೆ ಮಾಡುವಲ್ಲಿ ಹಾಗೂ ನಿಗಾವಣೆ ಮಾಡುವಲ್ಲಿ ಯಶಸ್ವಿಯಾಗಿ ವಿವಿದ ಸಂಚಾರ ದಟ್ಟಣೆ ನಿವಾರಣಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ.
5. ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಗೆ ಗೃಹರಕ್ಷಕ ಸಿಬ್ಬಂದಿ ಮತ್ತು ಟ್ರಾಫಿಕ್ ವಾರ್ಡನ್‌ಗಳ ತೊಡಗಿಸಿಕೊಳ್ಳುವಿಕೆ
6. ಸಿಗ್ನಲ್ ಫ್ರೀ ಕಾರಿಡಾರ್ ವ್ಯವಸ್ಥೆ
7. ಮುಕ್ತ ಎಡ ತಿರುವು ವ್ಯವಸ್ಥೆ
8. ಸಂಚಾರ ನಿಯಮ ಉಲ್ಲಂಘನೆ ಎಸಗುವವರ ವಿರುದ್ಧ ವಿಶೇಷ ಕಾರ್ಯಾಚರಣೆ
9. ಪೆಲಿಕಾನ್ ಸಿಗ್ನಲ್ ಲೈಟ್ ಅಳವಡಿಕೆ
10. ಸಂಚಾರ ಸೂಚನಾ ಫಲಕಗಳ ಅಳವಡಿಕೆ
11. ಪ್ರತಿ ಸಂಚಾರ ಪೊಲೀಸ್ ಠಾಣೆಯಲ್ಲಿ ಮಾದರಿ ರಸ್ತೆಗಳು ಮತ್ತು ಝೀರೋ ಟಾಲರೆನ್ಸ್ ರಸ್ತೆಗಳ ಆಯ್ಕೆ
12. ಸಂಚಾರ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ
13. ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆಗೆದು ವೈಜ್ಞಾನಿಕ ರಸ್ತೆ ಉಬ್ಬುಗಳ ನಿರ್ಮಾಣ
14. ಸಂಪರ್ಕ ರಹಿತ ನಿಯಮ ಜಾರಿಗೆ ಹೆಚ್ಚು ಉತ್ತೇಜನ
15. ಅಡ್ಡಾದಿಡ್ಡಿ ವಾಹನಗಳ ನಿಲುಗಡೆ ನಿಯಂತ್ರಣ
16. ಅತಿವೇಗವಾಗಿ ಚಲಿಸುವ ವಾಹನಗಳಿಗೆ ನಿಯಂತ್ರಣ
17. ಅಪಾಯಕಾರಿ ರೀತಿಯಲ್ಲಿ ಚಲಿಸುವ ವಾಹನ ಚಾಲಕ/ಸವಾರರ ವಿರುದ್ಧ ಪರಿಣಾಮಕಾರಿ ಕ್ರಮ
18. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರ ವಿರುದ್ಧ ವಿಶೇಷ ಕಾರ್ಯಾಚರಣೆ
19. ವೀಲ್ಹಿಂಗ್ ಮತ್ತು ಡ್ರ್ಯಾಗ್ ರೇಸ್ ಮಾಡುವವರು ವಿರುದ್ಧ ಕಠಿಣ ಕ್ರಮ
20. ಗುರುತರ ಸಂಚಾರ ನಿಯಮ ಉಲ್ಲಂಘನೆ ಎಸಗುವ ಚಾಲಕ/ಸವಾರರ ಚಾಲನಾ ಅನುಜ್ಞಾ ಪತ್ರಗಳ ಅಮಾನತ್ತಿಗೆ ಕ್ರಮ.

- **ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳು ಗುರ್ತಿಸುವಿಕೆ :**

ಬೆಂಗಳೂರು ನಗರದಲ್ಲಿ ವಾಹನಗಳ ಸಂಚಾರ ದಟ್ಟಣೆಯ ಆಧಾರದ ಮೇಲೆ ಒಟ್ಟು 12 ರಸ್ತೆಗಳನ್ನು ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳಾನ್ನಾಗಿ ಗುರ್ತಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.

| | | | |
|---|---|---|---|
| 1. | ಬಳ್ಳಾರಿ ರಸ್ತೆ | – | **ಚಾಲುಕ್ಯ ವೃತ್ತದಿಂದ ಹೆಬ್ಬಾಳದವರೆಗೆ**<br>ವಿಂಡ್ಸರ್ ಮ್ಯಾನರ್ ಜಂಕ್ಷನ್ – ರಮಣ ಮಹರ್ಷಿ ರಸ್ತೆ – ಮೇಖ್ರಿ ವೃತ್ತದ ಮಾರ್ಗವಾಗಿ |

| | | | |
|---|---|---|---|
| 2 | ಹಳೇ ಮದ್ರಾಸ್ ರಸ್ತೆ | – | <u>ಟ್ರಿನಿಟಿ ವೃತ್ತದಿಂದ ಕೆ.ಆರ್. ಪುರಂ ವರೆಗೆ</u><br>ಹಲಸೂರು ಕೆರೆ – ಹಳೆ ಮದ್ರಾಸ್ ರಸ್ತೆ ಮತ್ತು ಬೆನ್ನಿಗಾನಹಳ್ಳಿ<br>ಹಾಗೂ <u>ಕೆ.ಆರ್. ಪುರಂನಿಂದ ರಾಷ್ಟ್ರೀಯ ಹೆದ್ದಾರಿ 648 ವರೆಗೆ</u><br>ಹೂಡಿ – ಐಟಿಪಿಎಲ್ ಮತ್ತು ಹೋಪ್ ಫಾರಂ ಮಾರ್ಗವಾಗಿ |
| 3 | ಹಳೇ ಏರ್‌ಪೋರ್ಟ್ ರಸ್ತೆ | – | <u>ಎ.ಎಸ್.ಸಿ ಸೆಂಟರ್ ನಿಂದ ಕಾಡುಗೋಡಿ ವರೆಗೆ</u><br>ದೊಮ್ಮಲೂರು – ಮಾರತ್‌ಹಳ್ಳಿ – ಕುಂದಲಹಳ್ಳಿ – ವರ್ತೂರು ಮತ್ತು ಹೋಪ್ ಫಾರಂ ಮಾರ್ಗವಾಗಿ |
| 4 | ಸರ್ಜಾಪುರ ರಸ್ತೆ | – | <u>ಹೊಸೂರು ರಸ್ತೆ ಸೆಂಟ್ ಜಾನ್ಸ್ ಆಸ್ಪತ್ರೆಯಿಂದ ಬಿಬಿಎಂಪಿ ವ್ಯಾಪ್ತಿಯ ಕಾರ್ಮೆಲ್‌ರಾಂ ಬ್ರಿಡ್ಜ್‌ವರೆಗೆ</u><br>ಜಕ್ಕಸಂದ್ರ – ಇಬ್ಲೂರು – ಹರಳೂರು ಜಂಕ್ಷನ್ ಮಾರ್ಗವಾಗಿ |
| 5 | ಹೊಸೂರು ರಸ್ತೆ | – | <u>ವೆಲ್ಲಾರ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್‌ವರೆಗೆ</u><br>ಆಡುಗೋಡಿ – ಫೋರಂ ಮಾಲ್ ಮತ್ತು ಮಡಿವಾಳ ಮಾರ್ಗವಾಗಿ |
| 6 | ಬನ್ನೇರುಘಟ್ಟ ರಸ್ತೆ | – | <u>ಡೈರಿ ವೃತ್ತದಿಂದ ನೈಸ್ ರಸ್ತೆ ವರೆಗೆ</u><br>ಜಯದೇವ ಫ್ಲೈಓವರ್ – ಜೆ.ಡಿ. ಮರ ಜಂಕ್ಷನ್ – ಬಿಳೇಕಳ್ಳಿ – ಅರಕೆರೆ ಮತ್ತು ಗೊಟ್ಟಿಗೆರೆ ಮಾರ್ಗವಾಗಿ |
| 7 | ಕನಕಪುರ ರಸ್ತೆ | – | <u>ಕೆ.ಆರ್. ರಸ್ತೆಯಿಂದ ನೈಸ್ ರಸ್ತೆವರೆಗೆ</u><br>ಬನಶಂಕರಿ – ಸಾರಕ್ಕಿ – ಕೋಣನಕುಂಟೆ ಮಾರ್ಗವಾಗಿ |
| 8 | ಮೈಸೂರು ರಸ್ತೆ | – | <u>ಹಡ್ಸನ್ ವೃತ್ತದಿಂದ ನೈಸ್ ರಸ್ತೆವರೆಗೆ</u><br>ಟೌನ್‌ಹಾಲ್ – ಸ್ಯಾಟಲೈಟ್ ಟೌನ್ – ನಾಯಂಡಹಳ್ಳಿ – ಜ್ಞಾನಭಾರತಿ – ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ & ಕೆಂಗೇರಿ ಸ್ಯಾಟಲೈಟ್ ಟೌನ್ ಮಾರ್ಗವಾಗಿ |
| 9 | ಮಾಗಡಿ ರಸ್ತೆ | – | <u>ಹಳೇ ಬಿನ್ನಿ ಮಿಲ್ ನಿಂದ ನೈಸ್ ರಸ್ತೆವರೆಗೆ</u><br>ಟೋಲ್‌ಗೇಟ್ ಜಂಕ್ಷನ್ – ಜೈಮುನಿರಾವ್ ವೃತ್ತ – ಹೌಸಿಂಗ್ ಬೋರ್ಡ್ – ಕಾಮಾಕ್ಷಿಪಾಳ್ಯ – ಹೊರವರ್ತುಲ ರಸ್ತೆ – ಶ್ರೀಗಂಧಕಾವಲ್ ಸುಂಕದಕಟ್ಟೆ ಮಾರ್ಗವಾಗಿ. **ಹಾಗೂ**<br>**<u>ಅಂಜನ ನಗರ ಔಟರ್ ರಿಂಗ್ ರಸ್ತೆ – ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಮೈಸೂರು ರಸ್ತೆ ವರೆಗೆ</u>**<br>ಜಯದೇವ – ಜೆ.ಡಿ. ಮರ ಜಂಕ್ಷನ್ ಮಾರ್ಗವಾಗಿ |

| | | | |
|---|---|---|---|
| 10 | ತುಮಕೂರು ರಸ್ತೆ | – | <u>ಓಕಳಿಪುರಂನಿಂದ ಗೊರಗುಂಟೆಪಾಳ್ಯವರೆಗೆ</u><br>ಡಾ: ರಾಜ್‌ಕುಮಾರ್ ರಸ್ತೆ – ಸೋಪ್ ಫ್ಯಾಕ್ಟರಿ ಜಂಕ್ಷನ್ ಮತ್ತು ಯಶವಂತಪುರ ಮಾರ್ಗವಾಗಿ |
| 11 | ವೆಸ್ಟ್ ಆಫ್ ಕಾರ್ಡ್ ರಸ್ತೆ | – | <u>ಸೋಪ್ ಫ್ಯಾಕ್ಟರಿಯಿಂದ ಮೈಸೂರು ರಸ್ತೆವರೆಗೆ</u><br>ಇಸ್ಕಾನ್ – ರಾಜಾಜಿನಗರ – ಟೋಲ್‌ಗೇಟ್ ಜಂಕ್ಷನ್, ವಿಜಯನಗರ ಮತ್ತು ದೀಪಾಂಜಲಿ ಮಾರ್ಗವಾಗಿ |
| 12 | ಹೊರ ವರ್ತುಲ ರಸ್ತೆ | – | <u>ತುಮಕೂರು ರಸ್ತೆಯಿಂದ ತುಮಕೂರು ರಸ್ತೆವರೆಗೆ</u><br>ಹೆಬ್ಬಾಳ – ಕೆ.ಆರ್. ಪುರಂ – ಮಾರತ್‌ಹಳ್ಳಿ – ಇಬ್ಲೂರು, ಸೆಂಟ್ರಲ್ ಸಿಲ್ಕ್ ಬೋರ್ಡ್ – ಜೆ.ಡಿ. ಮರ ಜಂಕ್ಷನ್ – ನಾಯಂಡಹಳ್ಳಿ ಜಂಕ್ಷನ್ – ಕೊಟ್ಟಿಗೆಪಾಳ್ಯ ಜಂಕ್ಷನ್ ಮತ್ತು ಗೊರಗುಂಟೆಪಾಳ್ಯ ಮಾರ್ಗವಾಗಿ |

ಜನಸಂಖ್ಯೆ ಹಾಗೂ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳಗೊಂಡಿದ್ದರ ಪರಿಣಾಮ ಅನೇಕ ರೀತಿಯಲ್ಲಿ ಸಂಚಾರ ಸಮಸ್ಯೆಗಳು ಅಂದರೆ ಸಂಚಾರದಲ್ಲಿ ದಟ್ಟಣೆ, ಸುಗಮ ಸಂಚಾರಕ್ಕೆ ಅಡ್ಡಿ, ಸಂಚಾರ ಸ್ಥಗಿತಗಳ ಜೊತೆಗೆ ಅಪಘಾತಗಳ ಹೆಚ್ಚಳಕ್ಕೆ ಕಾರಣವಾಗಿದೆ. ಈ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಘನ ಸರ್ಕಾರವು ಬೆಂಗಳೂರು ನಗರ ಸಂಚಾರ ವ್ಯವಸ್ಥೆ ಸುಧಾರಣೆಗೆ ಹತ್ತು ಹಲವು ವಿನೂತನ ಯೋಜನೆಗಳನ್ನು ಹಂತ ಹಂತವಾಗಿ ಹಮ್ಮಿಕೊಳ್ಳುವ ಸಲುವಾಗಿ ಕಾರ್ಯ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅಡಿ ಇರುವ ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ಸೇರಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಶ್ರಮ ವಹಿಸುತ್ತಿದೆ. ಸರ್ಕಾರದ ಆದೇಶದ ಮೇರೆಗೆ ಹೈ ಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿನ ಆಗಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಪೂರೈಸಲು ಕೆ.ಆರ್.ಡಿ.ಸಿ.ಎಲ್ ಗೆ ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಸುಗಮ ಸಂಚಾರ ಏರ್ಪಡಿಸುವ ನಿಟ್ಟಿನಲ್ಲಿ ಈಗಾಗಲೇ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಗುತ್ತಿದೆ.

- <u>**ಸಿ.ಬಿ.ಡಿ ಏರಿಯಾ: (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್)**</u>

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ವಿಧಾನಸೌಧದ ಸುತ್ತ 4 ಚ.ಕಿ.ಮೀ ವ್ಯಾಪ್ತಿಯನ್ನು ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಟ್ ಪ್ರದೇಶವೆಂದು ಈಗಾಗಲೇ ಘೋಷಿಸಲಾಗಿದೆ. ಈ ವ್ಯಾಪ್ತಿಯಲ್ಲಿ ವಿಧಾನಸೌಧ, ವಿಕಾಸ ಸೌಧ, ಆರ್.ಬಿ.ಐ ಒಳಗೊಂಡಂತೆ ಎತ್ತರದ ಕಟ್ಟಡಗಳು, ಕಾನ್ಸುಲೇಟ್ ಕಛೇರಿಗಳು, ಪ್ರಮುಖ ಹೋಟೆಲ್‌ಗಳು, ಆಸ್ಪತ್ರೆಗಳು, ಶಾಪಿಂಗ್ ಕಾಂಪ್ಲೆಕ್ಸ್‌ಗಳು, ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು, ಉದ್ಯಾನವನಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಛೇರಿಗಳು, ಕ್ರೀಡಾಂಗಣಗಳು, ಬೆಂಗಳೂರು ಟರ್ಫ್ ಕ್ಲಬ್, ಗಾಲ್ಫ್ ಕ್ಲಬ್ ಇತ್ಯಾದಿಗಳಿರುತ್ತವೆ. ಈ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ಪ್ರಾರಂಭದಲ್ಲಿ ನಿರ್ಮಾಣಗೊಂಡ ಸ್ಥಿತಿಯಲ್ಲಿಯೇ ಇದ್ದು ಇವುಗಳ ಅಗಲೀಕರಣದಲ್ಲಿ ಯಾವುದೇ ಬದಲಾವಣೆ ಆಗದೇ ಇರುವುದ ಸಂಚಾರ ದಟ್ಟಣೆ ಉಂಟಾಗಲು ಕಾರಣವಾಗಿರುತ್ತದೆ.

ಸಿ.ಬಿ.ಡಿ. (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಸ್) ವ್ಯಾಪ್ತಿ ಪ್ರದೇಶದಲ್ಲಿರುವ ಎಲ್ಲಾ ಜಂಕ್ಷನ್‌ಗಳಲ್ಲಿ ಪೀಕ್ ಹವರ್ಸ್ ಮತ್ತು ನಾನ್‌ಪೀಕ್‌ಹವರ್ಸ್ ವೇಳೆಯಲ್ಲಿ ಅಗತ್ಯ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನೇಮಿಸಿಕೊಂಡು, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುತ್ತಿರುತ್ತದೆ.

ಈ (ಸೆಂಟ್ರಲ್ ಬಿಸಿನೆಸ್ ಡಿಸ್ಟ್ರಿಕ್ಸ್) ಏರಿಯಾಗಳಲ್ಲಿ ಏನೆಲ್ಲಾ ಅಭಿವೃದ್ಧಿ ಕಾರ್ಯಗಳಾಗಬೇಕು ಎಂಬುದರ ಬಗ್ಗೆ ವಿಸ್ತೃತವಾಗಿ ಮಾಹಿತಿಯನ್ನು ಸಿದ್ಧಪಡಿಸಿದ್ದು ಈಗಾಗಲೇ ಸಂಬಂಧಪಟ್ಟ ಪೌರಸಂಸ್ಥೆಗಳು ಮೇಲ್ಕಂಡ ಅಭಿವೃದ್ಧಿ ಕಾರ್ಯಗಳಲ್ಲಿ ಕಾರ್ಯಪ್ರವೃತಿಗೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

- **ಅತಿ ಹೆಚ್ಚು ದಟ್ಟಣೆ ಉಂಟಾಗುತ್ತಿರುವ ಜಂಕ್ಷನ್‌ಗಳು ಹಾಗೂ ರಸ್ತೆಗಳ ಗುರ್ತಿಸುವಿಕೆ.**

ಬೆಂಗಳೂರು ನಗರದಲ್ಲಿ ಸಾರ್ವಜನಿಕರ ಸುಗಮ ಸಂಚಾರದ ಹಿತದೃಷ್ಟಿಯಿಂದ ಹಾಗೂ ಸಂಚಾರ ದಟ್ಟಣೆಯನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ನಗರದಲ್ಲಿ ದಟ್ಟಣೆ ಉಂಟಾಗುತ್ತಿರುವ 43 ಜಂಕ್ಷನ್ ಹಾಗೂ 99 ರಸ್ತೆಗಳನ್ನು ಗುರ್ತಿಸಲಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

**ಗುರ್ತಿಸಲಾಗಿರುವ ದಟ್ಟಣೆ ಉಂಟಾಗುತ್ತಿರುವ 43 ಜಂಕ್ಷನ್‌ಗಳು :-**

| | | | |
|---|---|---|---|
| 1 | ಹೆಬ್ಬಾಳ ಜಂಕ್ಷನ್ | 22 | ಬಾಪೂಜಿ ಜಂಕ್ಷನ್ |
| 2 | ಕೆ.ಆರ್.ಪುರಂ ಜಂಕ್ಷನ್ | 23 | ದೇವೇಗೌಡ ಜಂಕ್ಷನ್ |
| 3 | ಸಿಲ್ಕ್‌ಬೋರ್ಡ್ ಜಂಕ್ಷನ್ | 24 | ಮಧು ಪೆಟ್ರೋಲ್ ಬಂಕ್ ಜಂಕ್ಷನ್ |
| 4 | ಗೊರಗುಂಟೆಪಾಳ್ಯ ಜಂಕ್ಷನ್ | 25 | ಕದಂಬ ಹೋಟೆಲ್ ಜಂಕ್ಷನ್ |
| 5 | ಎಫ್.ಟಿ.ಐ. ಜಂಕ್ಷನ್ | 26 | ಕೊಡಿಗೇಹಳ್ಳಿ ಜಂಕ್ಷನ್ |
| 6 | ಸಾರಕ್ಕಿ ಜಂಕ್ಷನ್ | 27 | ಬ್ಯಾಟರಾಯನಪುರ ಜಂಕ್ಷನ್ |
| 7 | ಕೆ.ಎಸ್.ಲೇಔಟ್ ಜಂಕ್ಷನ್ | 28 | ಕೆಂಗುಂಟೆ ಸರ್ಕಲ್ |
| 8 | ಕಾಡುಬೀಸನಹಳ್ಳಿ ಜಂಕ್ಷನ್ | 29 | ಎಂ.ಸಿ. ಸರ್ಕಲ್ ವಿಜಯನಗರ |
| 9 | ದೇವರಬೀಸನಹಳ್ಳಿ ಜಂಕ್ಷನ್ | 30 | ಬಿ.ಎಫ್.ಡಬ್ಲ್ಯೂ.ಜಂಕ್ಷನ್ |
| 10 | ಬನಶಂಕರಿ ಬಸ್ ನಿಲ್ದಾಣ | 31 | ಕೋಣನಕುಂಟೆ ಜಂಕ್ಷನ್ |
| 11 | ಜೆ.ಡಿ.ಮರ ಜಂಕ್ಷನ್ | 32 | ತುಳಸಿ ಜಂಕ್ಷನ್ |
| 12 | ಸರ್ಜಾಪುರ ಸೆಂಟ್‌ಜಾನ್ ಸರ್ಕಲ್ | 33 | ಜಾಲಹಳ್ಳೀ ಕ್ರಾಸ್ |
| 13 | ಪೋತಲಪ್ಪ ಗಾರ್ಡನ್(ಆನೇಪಾಳ್ಯ ಜಂಕ್ಷನ್) | 34 | ಎಂ.ಎಸ್. ಪಾಳ್ಯ ಜಂಕ್ಷನ್ |
| 14 | ಸುಮನಹಳ್ಳಿ ಕೆಳಸೇತುವೆ | 35 | ಉದಯ ಟಿ.ವಿ. ಜಂಕ್ಷನ್ |
| 15 | ಒಪೆರಾ ಸರ್ಕಲ್ | 36 | ಬೊಮ್ಮನಹಳ್ಳಿ ಜಂಕ್ಷನ್ |
| 16 | ವಾಟರ್‌ಟ್ಯಾಂಕ್ ಜಂಕ್ಷನ್ | 37 | ಪಿ.ಸಿ. ಪಾಳ್ಯ ಜಂಕ್ಷನ್ |
| 17 | ಓಕಳಿಪುರಂ ಜಂಕ್ಷನ್ | 38 | ನ್ಯೂಲೈಟ್ ಜಂಕ್ಷನ್ |
| 18 | ಆರ್.ಆರ್.ಎಂ.ಆರ್ ಜಂಕ್ಷನ್ | 39 | ಮೇಕ್ರಿ ಸರ್ಕಲ್ ನಿಂದ ಬಿ.ಡಿ.ಎ ಜಂಕ್ಷನ್ ರಸ್ತೆ ಅಗಲೀಕರಣ |
| 19 | ಇಬ್ಬಲೂರು ಜಂಕ್ಷನ್ | 40 | ಪೀಣ್ಯ ಎಸ್.ಟಿ.ಟಿ.ಎಫ್. ಜಂಕ್ಷನ್ |
| 20 | ಜಯದೇವ ಫ್ಲೈ ಓವರ್ | 41 | ಮೈಸೂರು ರಸ್ತೆ ಸ್ಯಾಟಲೈಟ್ ಬಸ್‌ಸ್ಟ್ಯಾಂಡ್ ಕೆಂಗೇರಿ ಎದುರು |
| 21 | ನಾಯಂಡಹಳ್ಳಿ ಜಂಕ್ಷನ್ | 42 | ಏರ್‌ವ್ಯೂ ಪಾಯಿಂಟ್ ನಿಂದ ಸೋನಿ ವರ್ಲ್ಡ್ ಜಂಕ್ಷನ್ ಕಡೆಗೆ ನಿಂತಿರುವ ಕಾಮಗಾರಿ |
| | | 43 | ಶ್ರೀನಿವಾಗಿಲು ಜಂಕ್ಷನ್ |

ಗುರ್ತಿಸಲಾಗಿರುವ  ದಟ್ಟಣೆ ಉಂಟಾಗುತ್ತಿರುವ 99 ರಸ್ತೆಗಳು :-

| | | | |
|---|---|---|---|
| 1 | ರಮಣ ಮಹರ್ಷಿ ರಸ್ತೆ ( 1.5 ಕಿ.ಮೀ) | 51 | ಉತ್ತರಹಳ್ಳಿ ಮುಖ್ಯ ರಸ್ತೆ & ಮೈಸೂರು ರಸ್ತೆ ಜಂಕ್ಷನ್ ಮಧು ಪೆಟ್ರೋಲ್ ಬಂಕ್ ಜಂಕ್ಷನ್ ನಿಂದ ಉತ್ತರಹಳ್ಳಿ ಮುಖ್ಯ ರಸ್ತೆ ಮೋರಿಯವರೆಗೆ ಸುಮಾರು 200 ಮೀಟರ್ |
| 2 | ಡಾ॥ಮರೀಗೌಡ ರಸ್ತೆ ಡೈರಿ ಸರ್ಕಲ್‌ನಿಂದ ಲಾಲ್‌ಭಾಗ್ ಮೈನ್‌ಗೇಟ್ 1.6 ಕಿ ಮೀ | 52 | ಉತ್ತರಹಳ್ಳಿ ಮುಖ್ಯ ರಸ್ತೆ (ಶ್ರೀನಿವಾಸ ಪುರ ಕ್ರಾಸ್ ನಿಂದ ಆದಿತ್ಯಾ ಬೇಕರಿ ವರೆಗೆ,)ಸುಮಾರು 100 ಮೀಟರ್ |
| 3 | ನಾಗವಾರ ಜಂಕ್ಷನ್ | 53 | ಜವರೇಗೌಡನಗರ ನಗರ ಮುಖ್ಯ ರಸ್ತೆ (ಐಡಿಯಲ್ ಹೋಂ ಜಂಕ್ಷನ್ ನಿಂದ ನೇತಾಜಿ ಪಾರ್ಕ್ ಕಡೆಗೆ 100 ಮೀಟರ್) |
| 4 | ಒ.ಎಂ ರಸ್ತೆ 80 ಅಡಿ ರಸ್ತೆ ಜಂಕ್ಷನ್ | 54 | ಉತ್ತರಹಳ್ಳಿ ಮುಖ್ಯ ರಸ್ತೆ (ಆದಿತ್ಯಾ ಬೇಕರಿ ಜಂಕ್ಷನ್ ನಿಂದ ಬಿಜಿಎಸ್ ಜಂಕ್ಷನ್ ಕಡೆಗೆ,)ಸುಮಾರು 100 ಮೀಟರ್ |
| 5 | ಹೈನ್ಸ್‌ಜಂಕ್ಷನ್ | 55 | ವಾಟಾಳ್ ನಾಗರಾಜ್ ರಸ್ತೆ ಸುಜಾತ ಟಾಕೀಸ್ ಯಿಂದ ಖೋಡೆ ಸರ್ಕಲ್ 1 ಕಿ.ಮೀ |
| 6 | ಹೊರಮಾವುಜಂಕ್ಷನ | 56 | ಡಾ.ರಾಜಕುಮಾರ್ ರಸ್ತೆ ಪಾರಿಜಾತ ಯಿಂದ ಡಾ.ರಾಜಕುಮರ್ ರಸ್ತೆ 17ನೇ ಕ್ರಾಸ್ 300 ಮೀಟರ್ |
| 7 | ಟಿ.ಸಿ.ಪಾಳ್ಯ ಜಂಕ್ಷನ್. ಹಳೇ ಮದ್ರಾಸು ರಸ್ತೆ. ಸರ್ಕಾರಿ ಕಾಲೇಜು ಜಂಕ್ಷನ್ ನಿಂದ ಟಿ.ಸಿ.ಪಾಳ್ಯ ಜಂಕ್ಷನ್ ವರೆಗೆ 700 ಮೀಟರ್ | 57 | ಎಂ.ಕೆ.ಕೆ ರಸ್ತೆ 19ನೇ ಮುಖ್ಯ ರಸ್ತೆ ಯಿಂದ ಶ್ರೀರಾಂಪುರ ಮೆಟ್ರೋ ವರೆಗೆ 1 ಕಿ.ಮೀ |
| 8 | ಹಳೇ ಮದ್ರಾಸು ರಸ್ತೆ, ಎಂಎಂ ಟೆಂಪಲ್ ಜಂಕ್ಷನ್. ಕಸ್ತೂರಿ ನಗರ ಡೌನ್ ರ್‍ಯಾಂಪ್‌ನಿಂದ ನ್ಯೂಲೈಟ್ ಜಂಕ್ಷನ್ ವರೆಗೆ ಸುಮಾರು 1 ಕಿ.ಮೀ | 58 | ಸಂಪಿಗೆ ರಸ್ತೆ |
| 9 | ನ್ಯೂಲೈಟ್ ಜಂಕ್ಷನ್. ಎಂಎಂ ಟೆಂಪಲ್ ಜಂಕ್ಷನ್‌ನಿಂದ ನ್ಯೂಲೈಟ್ ಜಂಕ್ಷನ್ ವರೆಗೆ850 ಮೀಟರ್ | 59 | ಎಫ್.ಟಿ.ಐ ಜಂಕ್ಷನ್ |
| 10 | ಚನ್ನಸಂದ್ರ ಮುಖ್ಯ ರಸ್ತೆ, ಹೊಸರಸ್ತೆ ಜಂಕ್ಷನ್ (ಎಂ.ವಿ.ಜೆ. ಕಾಲೇಜು ಬಳಿಯಿಂದ ಓಫಾರಂ ಜಂಕ್ಷನ್)0.7 ಕಿ.ಮೀ. | 60 | ಡಾ॥ರಾಜ್ ಕುಮಾರ್ ಸ್ಮಾರಕ |

| | | | |
|---|---|---|---|
| 11 | ದೇವರಬೀಸನಹಳ್ಳಿ ಜಂಕ್ಷನ್ | 61 | ರಾಜಾಜಿನಗರ ಎಂಟ್ರೆನ್ಸ್ |
| 12 | ಕಾಡುಬೀಸನಹಳ್ಳಿ ಜಂಕ್ಷನ್ | 62 | ಲಗ್ಗೆರೆ ಬ್ರಿಡ್ಜ್ |
| 13 | ಹೊಸೂರು ಲಷ್ಕರ್ ರಸ್ತೆ<br>1) ಪೋತಲಪ್ಪ ಗಾರ್ಡನ್ ಜಂಕ್ಷನ್‌ನಿಂದ ಸಿಎಆರ್ ಹಾಪ್‌ಕಾಮ್ಸ್ ಗೇಟ್ ವರೆಗೆ 0.8 ಕಿ.ಮೀ<br>2) ನ್ಯೂ ಮೈಕೋಲಿಂಕ್‌ರಸ್ತೆ ಬಾಷ್‌ಗೇಟ್ ನಿಂದ ಆಡುಗೋಡಿ ಜಂಕ್ಷನ್‌ವರೆಗೆ 0.3 ಕಿ.ಮೀ | 63 | ಸಿ.ಎಂ.ಟಿ.ಐ ಜಂಕ್ಷನ್ (ತುಮಕೂರು ರಸ್ತೆ– ಎಫ್.ಟಿ.ಐ ಜಂಕ್ಷನ್.) (ಸಿ.ಎಂ.ಟಿ.ಐ ಜಂಕ್ಷನ್– ಪೀಣ್ಯ ಫ್ಲೈಓವರ್ ಡೌನ್ ರ್‍ಯಾಂಪ್) (ಸಿ.ಎಂ.ಟಿ.ಐ ಜಂಕ್ಷನ್ – ಗೊರಗುಂಟೆ ಪಾಳ್ಯ ಜಂಕ್ಷನ್) |
| 14 | ಮಡಿವಾಳ ಎಸ್,ಪಿ ರಸ್ತೆಯಿಂದ್ ಅಯ್ಯಪ್ಪಜಂಕ್ಷನ್‌ವರೆಗೆ 600 ಮೀಟರ್ | 64 | ಗೋರಗುಂಟೆ ಪಾಳ್ಯ ಜಂಕ್ಷನ್ |
| 15 | ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ 29ನೇ ಮೈನ್‌ಜಂಕ್ಷನ್‌ವರೆಗೆ ಹಾಗೂ 29ನೇ ಜಂಕ್ಷನ್‌ನಿಂದ ಬಿಟಿಎಂರಿಂಗ್ ರಸ್ತೆ 5ನೇ ಮೈನ್ ಹೆಚ್.ಎಸ್.ಆರ್ ಲೇಔಟ್ ವರೆಗೆ 1 ಕಿ.ಮೀ | 65 | ಯಶವಂತಪುರ ಬಜಾರ್ ಸರ್ಕಲ್ |
| 16 | ಬನ್ನೇರುಘಟ್ಟ ಮುಖ್ಯರಸ್ತೆ, ಗೊಟ್ಟಿಗೆರೆ ಜಂಕ್ಷನ್‌ನಿಂದ ಕೋಳಿಫಾರಂ ಗೇಟ್ ಜಂಕ್ಷನ್‌ವರೆಗೆ 1.9 ಕೀ.ಮೀ | 66 | ಕಿರ್ಲೋಸ್ಕರ್ ಜಂಕ್ಷನ್ |
| 17 | ಜೆ.ಡಿ ಮರ ಜಂಕ್ಷನ್ ( ಶಿಲ್ಪ ಜಂಕ್ಷನ್ ನಿಂದ ಜೆ.ಡಿ ಮರ ಜಂಕ್ಷನ್. | 67 | ಟಿ. ದಾಸರಹಳ್ಳಿ ಜಂಕ್ಷನ್ |
| 18 | ಕೆ.ಜಿ. ರಸ್ತೆ–ಮೈಸೂರು ಬ್ಯಾಂಕ್ ಜಂಕ್ಷನ್ (ಮೈಸೂರು ಬ್ಯಾಂಕ್ ಜಂಕ್ಷನ್ ನಿಂದ ಸಾಗರ್ ಜಂಕ್ಷನ್ ಜಂಕ್ಷನ್ ವರೆಗೆ 300ಮೀ) | 68 | ಎಸ್‌ಆರ್‌ಎಸ್ ಜಂಕ್ಷನ್ ನಿಂದ ಹೆಸರಘಟ್ಟ ಕ್ರಾಸ್ ಜಂಕ್ಷನ್ ವರೆಗೆ |
| 19 | ಕೆ.ಜಿ.ರಸ್ತೆ ಸಾಗರ್ ಜಂಕ್ಷನ್(ಸಾಗರ್ ಜಂಕ್ಷನ್ ನಿಂದ ಎಲೈಟ್ ಜಂಕ್ಷನ್ –300 ಮೀ) | 69 | ಎಸ್.ಎಂ ರೋಡ್ |
| 20 | ಸನ್ಮಾನ್ ಗೇಟ್–ಟಿ.ಬಿ. ರಸ್ತೆ(ಎಲೈಟ್ ಜಂಕ್ಷನ್ ನಿಂದ ಗಣೇಶ ದೇವಸ್ಥಾನದ ವರೆಗೆ–400ಮೀ) | 70 | ಎನ್‌ಟಿಟಿಎಫ್ ಜಂಕ್ಷನ್ |
| 21 | ಆನಂದರಾವ್ ವೃತ್ತ–ಶೇಷಾದ್ರಿ ರಸ್ತೆ(ಆನಂದರಾವ್ ವೃತ್ತದಿಂದ ಸುಬ್ಬಣ್ಣ ವೃತ್ತದವರೆಗೆ–100ಮೀ) | 71 | ಎಂ.ಇ.ಎಸ್ ರಿಂಗ್ ರಸ್ತೆ (ಮುತ್ಯಾಲನಗರ ರೈಲ್ವೇ ಓವರ್ ಬ್ರಿಡ್ಜ್ ನಿಂದ ಬಿಇಎಲ್ ಯು ತಿರುವಿನ ವರೆಗೆ ಸುಮಾರು 01 ಕಿ.ಮೀ.) |

| | | | |
|---|---|---|---|
| 22 | ಸಿರ್ಸಿ ಸರ್ಕಲ್ | 72 | ಬಿಎಫ್‌ಡಬ್ಲ್ಯೂ ಜಂಕ್ಷನ್ (ಎಸ್.ಆರ್.ಎಸ್ ಮೆಟ್ರೋ ಜಂಕ್ಷನ್ ನಿಂದ ಜಲವಾಯು ಅಪಾರ್ಟ್‌ಮೆಂಟ್ ವರೆಗೆ ಸುಮಾರು 0800 ಮೀಟರ್) |
| 23 | ಬಿ ಬಿ ಜಂಕ್ಷನ್ | 73 | ಸಂಧೀಪ್ ಉನ್ನಿಕೃಷ್ಣನ್ ರಸ್ತೆ (ರಾಜರತ್ನಂ ವೃತ್ತದಿಂದ ರಾಮಚಂದ್ರಾಪುರಾ ಕ್ರಾಸ್‌ವರೆಗೆ 01 ಕಿ.ಮೀ) |
| 24 | ಬಿವಿಕೆ ಐಯಂಗಾರ್ ರಸ್ತೆ | 74 | ಸಂಧೀಪ್ ಉನ್ನಿಕೃಷ್ಣನ್ ರಸ್ತೆ (ರಾಮಚಂದ್ರಾಪುರ ವೃತ್ತದಿಂದ ಏರ್‌ಫೋರ್ಸ್ ಗೇಟ್ ವರೆಗೆ 01 ಕಿ.ಮೀ) |
| 25 | ಟೋಲ್‌ಗೇಟ್ ಜಂಕ್ಷನ್ | 75 | ಮೊದಲನೆ ಆದ್ಯತೆ ರಸ್ತೆ/ಸ್ಥಳ ಜಾಮೀಯಾದಿಂದ ಅನ್ನಪೂರ್ಣ ಜಂಕ್ಷನ್ ವರೆಗೆ 200 ಕಿ.ಮೀ |
| 26 | ಎಸ್‌ಜೆಪಿ ರಸ್ತೆ– ಮಾರ್ಕೆಟ್ ಸರ್ಕಲ್ ನಿಂದ ಜಾಮೀಯಾ ಮಸೀದಿಯವರೆಗೆ, 250ಮೀ. | 76 | ಎರಡನೇ ಆದ್ಯತೆ ರಸ್ತೆ/ಸ್ಥಳ ಮೆಡಿಕಲ್ ಜಂಕ್ಷನಿಂದ ಮಾರ್ಕೇಟ್ ಸರ್ಕಲ್ ವರೆಗೆ 200 ಕಿ.ಮೀ |
| 27 | ಮೊದಲನೆ ಎರಡನೇ ಆದ್ಯತೆ ರಸ್ತೆ/ಸ್ಥಳ: ಬಿವಿಕೆ ಅಯ್ಯಂಗಾರ್ ರಸ್ತೆ ಚಿಕ್ಕಪೇಟೆ ಸರ್ಕಲ್ ನಿಂದ ಅಭಿನಯ ಜಂಕ್ಷನ್ ವರೆಗೆ 400ಮೀ. | 77 | ಮೂರನೇ ಆದ್ಯತೆ ರಸ್ತೆ/ಸ್ಥಳ ಅನ್ನಪೂರ್ಣ ಸರ್ಕಲ್‌ನಿಂದ ಬಸಪ್ಪ ಸರ್ಕಲ್ ವರೆಗೂ |
| 28 | ಮೂರನೇ ಆದ್ಯತೆ ರಸ್ತೆ/ಸ್ಥಳ: ಅವೆನ್ಯೂ ರಸ್ತೆ :ಅವೆನ್ಯೂ ರಸ್ತೆ ಪ್ರವೇಶದಿಂದ ಕಾಮತ್ ಹೊಟೇಲ್ ಜಂಕ್ಷನ್ 1ಕೀ.ಮೀ. | 78 | ನಾಲ್ಕನೇ ಆದ್ಯತೆ ರಸ್ತೆ/ಸ್ಥಳ ಭಾರತ್ ಸರ್ಕಲ್ ನಿಂದ ನಾಲಾ ಕ್ರಾಸ್‌ವರೆಗೂ |
| 29 | ನಾಲ್ಕನೇ ಆದ್ಯತೆರಸ್ತೆ/ಸ್ಥಳ:ಎ ಎಸ್ ಚಾರ್ ರಸ್ತೆ ಚಿಕ್ಕಪೇಟೆ ಸರ್ಕಲ್ ನಿಂದ ಸುಲ್ತಾನ ಪೇಟೆ ಕ್ರಾಸ್ ವರೆಗೆ. 150ಮೀ. | 79 | 1. ಆರ್.ವಿ. ರಸ್ತೆ, (ಲಾಲ್‌ಬಾಗ್ ವೆಸ್ಟ್‌ಗೇಟ್ ಜಂ.ಬಳಿ) ಸುಮಾರು 300 ಮೀಟರ್‌ನಷ್ಟು ಉದ್ದ |
| 30 | ಹುಣಸೇಮರ ಜಂಕ್ಷನ್ | 80 | 2. ಕೆ.ಆರ್. ರಸ್ತೆ (ಭಾರತಿ ನರ್ಸಿಂಗ್ ಹೋಂ ಜಂ.ಬಳಿ) ಸುಮಾರು 350–ರಿಂದ 400 ಮೀ. |
| 31 | ಪ್ರಸನ್ನ ಜಂಕ್ಷನ್ | 81 | ಗಾಂಧಿಬಜಾರ್ ಮುಖ್ಯರಸ್ತೆ ಸುಮಾರು 1 ಕಿ.ಮೀ. |
| 32 | ಜೋಳೂರು ಪಾಳ್ಯ ಜಂಕ್ಷನ್ | 82 | ಕತ್ರಿಗುಪ್ಪೆ ಮುಖ್ಯರಸ್ತೆ ವೈ ಜಂಕ್ಷನ್‌ನಿಂದ ವಿದ್ಯಾಪೀಠ ಜಂಕ್ಷನ್‌ವರೆಗೆ ಸುಮಾರು 750 ಮೀ. |

| | | | |
|---|---|---|---|
| 33 | ಗೋಪಾಲಪುರ ಕ್ರಾಸ್ | 83 | 14ನೇ ಮುಖ್ಯರಸ್ತೆ (ರಿಂಗ್ ರಸ್ತೆ, ಜೆ.ಪಿ.ನಗರ) 15ನೇ ಅಡ್ಡರಸ್ತೆ ಸಂಪಿಗೆ ಮರ ಜಂಕ್ಷನ್ ಯಿಂದ ಡಾಲ್ಮೀಯ ಜಂಕ್ಷನ್ ವರಗೆ ಸುಮಾರು ಅಂದಾಜು ಉದ್ದ 800 ಮೀ |
| 34 | 1ನೇ ಮುಖ್ಯರಸ್ತೆ ಬಸವೇಶ್ವರನಗರ ಎನ್.ಪಿ.ಎಸ್ ಜಂಕ್ಷನ್ ನಿಂದ ಹಾವನೂರು ಸರ್ಕಲ್ ವರಗೆ. | 84 | 33ನೇ ಮುಖ್ಯರಸ್ತೆ (ರಿಂಗ್ ರಸ್ತೆ, ಜೆ.ಪಿ.ನಗರ) 15ನೇ ಅಡ್ಡರಸ್ತೆ ಸಿಂಧೂರ ಜಂಕ್ಷನ್ ಯಿಂದ ಪುಟ್ಟೇನಹಳ್ಳಿ ಅಂಡರ್ ಪಾಸ್ ವರಗೆ ಸುಮಾರು ಅಂದಾಜು ಉದ್ದ 1 ಕಿ.ಮೀ |
| 35 | ಮಾಗಡಿ ರಸ್ತೆ ಎಂ.ಸಿ ಸರ್ಕಲ್ ನಿಂದ ವೀರೇಸ್ ಥೇಟರ್‌ವರಗೆ. | 85 | ಅರಕೆರೆ ಗಣೇಶ ದೇವಸ್ಥಾನ (ಬನ್ನೇರುಘಟ್ಟ ರಸ್ತೆ ಯಿಂದ ದೊರೆಸಾನಿ ಪಾಳ್ಯ ಪಾರೆಸ್ಟ್ ಗೇಟ್ ವರಗೆ ಸುಮಾರು ಅಂದಾಜು ಉದ್ದ 1 ಕಿ.ಮೀ) |
| 36 | ಪೈಪ್‌ಲೈನ್ ರಸ್ತೆ ರಮೇಶ್ ಬಾಬು ಸರ್ಕಲ್ ನಿಂದ ಹೊಯ್ಸಳ ಸರ್ಕಲ್ ವರೆಗೆ | 86 | 36ನೇ ಅಡ್ಡರಸ್ತೆ 4ನೇ ಮುಖ್ಯ ರಸ್ತೆ ಜಂಕ್ಷನ್ (32ನೇ ಅಡ್ಡರಸ್ತೆ ಯಿಂದ ಆರ್.ವಿ ಮೆಟ್ರೋ ವರಗೆ ಸುಮಾರು ಅಂದಾಜು ಉದ್ದ 800.ಮೀ |
| 37 | ಪಟೇಗಾರ ಪಾಳ್ಯ ಮುಖ್ಯರಸ್ತೆ ತ್ರೀಮೂರ್ತಿ ಸರ್ಕಲ್ ನಿಂದ ವೃಷಭವತಿ ನಾಲೆ ವರೆಗೆ. | 87 | ಇಟ್ಟಮಡು ಜಂಕ್ಷನ್ |
| 38 | ಮೈಸೂರು ರಸ್ತೆ ಬಾಪೂಜಿನಗರ ಜಂಕ್ಷನ್ | 88 | ಕತ್ರಿಗುಪ್ಪೆ ಜಂಕ್ಷನ್ |
| 39 | ಬಿಹೆಚ್‌ಈಎಲ್ ಮೈಸೂರು ರಸ್ತೆ | 89 | ಕಾಮಾಕ್ಯ ಜಂಕ್ಷನ್ |
| 40 | ಪಂತರಪಾಳ್ಯ ಬಸ್ ನಿಲ್ದಾಣ ಮೈಸೂರು ರಸ್ತೆ | 90 | ಬನಶಂಕರಿ ಬಸ್ ನಿಲ್ದಾಣ |
| 41 | ಮೈಸೂರು ರಸ್ತೆ ರಾಜರಾಜೇಶ್ವರಿ ಜಂಕ್ಷನ್ | 91 | ಸಾರಕ್ಕಿ ಜಂಕ್ಷನ್ (ಬನಶಂಕರಿ ದೇವಸ್ಥಾನದಿಂದ ಸಾರಕ್ಕಿ ರಿಂಗ ರಸ್ತೆ –0.6 ಕಿ.ಮಿ) |
| 42 | ಮಾಗಡಿ ಮುಖ್ಯರಸ್ತೆ, ಕಾಮಾಕ್ಷಿಪಾಳ್ಯ ಸಂಚಾರ ಠಾಣೆಯಿಂದ ಸುಮನಹಳ್ಳಿ ಜಂಕ್ಷನ್ ವರೆಗೆ 1.5 ಕಿ.ಮೀ | 92 | ಕೋಣನಕುಂಟೆ ಜಂಕ್ಷನ್ (ಚುಂಚಘಟ್ಟ ಕ್ರಾಸ್ ನಿಂದ ಕೋಣನಕುಂಟೆ – 1 ಕಿ.ಮಿ) |
| 43 | ನಾಗರಭಾವಿ ರಿಂಗ್ ರಸ್ತೆಯ ಸರ್ವೀಸ್ ರಸ್ತೆಯ ವಿಜಯಾ ನೇತ್ರಾಲಯ ಅಂಡರ್ ಪಾಸ್ | 93 | ಕೆ.ಎಸ್.ಲೇಔಟ್ (ದಯಾನಂದ ಸಾಗರ್ ಕಾಲೇಜ್ ನಿಂದ ಕೆ.ಎಸ್.ಲೇಔಟ್ ಜಂಕ್ಷನ್–0.5 ಕಿಮಿ) |
| 44 | ಮಾಗಡಿ ಮುಖ್ಯರಸ್ತೆ ಆಶ್ರಯ ಜಂಕ್ಷನ್ | 94 | ಚಿಕ್ಕಲಸಂದ್ರ ಜಂಕ್ಷನ್(ಉತ್ತರಹಳ್ಳಿ ಸರ್ಕಲ್‌ನಿಂದ ಛತ್ರಿಮರ ಜಂಕ್ಷನ್–2.1 ಕಿಮಿ) |
| 45 | ಹಳೇರಿಂಗ್ ರಸ್ತೆಯ ಉಲ್ಲಾಳ ಜಂಕ್ಷನ್ | 95 | ದಿನ್ನೂರು ರಸ್ತೆ (ಆರ್.ಟಿ.ನಗರ ಪಿ.ಎಸ್ ಜಂಕ್ಷನ್ ನಿಂದ ಪುಷ್ಪಾಂಜಲಿ ಟಾಕೀಸ್ ಜಂಕ್ಷನ್ ವರೆಗೆ) |

| | | | |
|---|---|---|---|
| **46** | ಬಳ್ಳಾರಿ ಮುಖ್ಯರಸ್ತೆ ಮತ್ತು ಸರ್ವೀಸ್ ರಸ್ತೆ | **96** | ಯಲಹಂಕ ಮುಖ್ಯ ರಸ್ತೆ (ಅಲ್ಲಾಳಸಂದ್ರ ಬ್ರೀಡ್ಜ್‌ನಿಂದ–ಕೋಗಿಲು ಕ್ರಾಸ್) |
| **47** | ಭೂಪಸಂದ್ರ ಮುಖ್ಯರಸ್ತೆ<br>ಕೆ–2 ಬಸ್ ನಿಲ್ದಾಣದಿಂದ ನಾಗಶೆಟ್ಟಹಳ್ಳಿ ಮುಖ್ಯ ರಸ್ತೆಯವರೆಗೆ | **97** | ಉನ್ನಿಕೃಷ್ಣನ್ ಮುಖ್ಯ ರಸ್ತೆ (ಉನ್ನಿಕೃಷ್ಣನ್ ಜಂಕ್ಷನ್–ಎಂಎಸ್ ಪಾಳ್ಯ) 03.5 ಕೀ.ಮೀ |
| **48** | ಹೆಬ್ಬಾಳ ಫ್ಲೈ ಓವರ ಸಿಟಿ ಕಡೆಗೆ (ಪಿಕ್ ಅವರ್ಸ್‌ನಲ್ಲಿ ಕೆಂಪಾಪುರದ ವರೆಗೆ ) | **98** | ಆಸ್ಪತ್ರ ರಸ್ತೆ 400 ಮೀ |
| **49** | ಹೆಬ್ಬಾಳ ಫ್ಲೈ ಓವರ ಸಿಟಿ ಕಡೆಗೆ (ಪಿಕ್ ಅವರ್ಸನಲ್ಲಿ ಕೆಂಪಾಪುರದ ವರೆಗೆ ) | **99** | ವಿದ್ಯಾರಣ್ಯಪುರ ಮುಖ್ಯ ರಸ್ತೆ 04.ಕೀ ಮೀ |
| **50** | ಬಾಗಲೂರು ಮುಖ್ಯರಸ್ತೆ<br>(ನಿತೇಶ್‌ಅರ್ಪಾರ್ಟ್‌ಮೆಂಟ್<br>ನಿಂದರೇವಾ ಜಂಕ್ಷನ್ ವರೆಗೆ2 ಕಿ.ಮೀ) | | |

ಮೇಲ್ಕಂಡಂತೆ ಗುರ್ತಿಸಲಾಗಿರುವ ಜಂಕ್ಷನ್‌ಗಳು ಹಾಗೂ ರಸ್ತೆಗಳಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನೇಮಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ.

- ನಗರದಲ್ಲಿ ಇಲ್ಲಿಯವರೆಗೂ ಸುಗಮ ಸಂಚಾರದ ನಿಧಾನಗತಿಗೆ ಕಾರಣವಾಗುವ ಪಾಟ್‌ಹೋಲ್ಸ್‌ಗಳು, ಮ್ಯಾನ್‌ಹೋಲ್ಸ್‌ಗಳು, ವಾಟರ್ ಲಾಗಿಂಗ್ ಸ್ಥಳಗಳನ್ನು ಗುರ್ತಿಸಿ ಸಂಬಂಧಪಟ್ಟ ಇಲಾಖೆಗೆ ಮಾಹಿತಿಯನ್ನು ರವಾನಿಸಲಾಗಿರುತ್ತದೆ.
- ನಗರದಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆ ಹಾಗೂ ನಿಧಾನಗತಿಗೆ ವಿವಿಧ ಪೌರಸಂಸ್ಥೆಗಳಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಸಹ ಕಾರಣವಾಗಿದ್ದು, ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳಿಗೆ ತ್ವರಿತವಾಗಿ ಮುಕ್ತಾಯಗೊಳಿಸಲು ಕ್ರಮ ಕೈಗೊಳ್ಳುವ ಕುರಿತು ಮನವಿ ಮಾಡಲಾಗಿರುತ್ತದೆ.
- ಸಂಚಾರ ದಟ್ಟಣೆ/ ಸಮಸ್ಯೆಗಳು ಕಂಡುಬರುತ್ತಿರುವ ಸ್ಥಳಗಳಲ್ಲಿ ಪರಿವೀಕ್ಷಣೆ ನಡೆಸಿ ಸುಗಮ ಸಂಚಾರದ ಹಿತದೃಷ್ಟಿಯಿಂದ ನಗರದ ಹಲವಾರು ಸ್ಥಳಗಳಲ್ಲಿ ಬಲ ತಿರುವು ಹಾಗೂ ಯು–ತಿರುವುಗಳನ್ನು ನಿರ್ಬಂಧಿಸಲಾಗಿದೆ.

- ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿನ ಹೆಚ್ಚು ಸಂಚಾರ ದಟ್ಟಣೆ ಇರುವ ಪ್ರದೇಶಗಳನ್ನು ಗುರುತಿಸಿ ರಸ್ತೆ ಅಗಲವಿದ್ದು ಮುಕ್ತ ಎಡ ತಿರುವು ಅಥವಾ ಬಲ ತಿರುವು ಇರುವ ಕಡೆಗಳಲ್ಲಿ ಸಂಚಾರ ಪರಿಕರಗಳನ್ನು (Street Furniture) ಅಳವಡಿಸಲಾಗಿದೆ.
- ಬೆಂಗಳೂರು ನಗರದಲ್ಲಿ ಝೀರೋ ಟಾಲರೆನ್ಸ್ ರಸ್ತೆಗಳನ್ನು ಗುರ್ತಿಸಿ, ಅಂತಹ ರಸ್ತೆಗಳಲ್ಲಿ ಯಾವುದೇ ರೀತಿಯ ಅನಧಿಕೃತ ವಾಹನ ನಿಲುಗಡೆ, ತಪ್ಪು ವಾಹನ ನಿಲುಗಡೆ ಹಾಗೂ ಫುಟ್‌ಪಾತ್ ಮೇಲೆ ವಾಹನ ನಿಲುಗಡೆಗಳಾಗಂತೆ ಸಂಚಾರ ಅಧಿಕಾರಿಗಳ ಗಸ್ತುಗಳನ್ನು ಏರ್ಪಡಿಸಲಾಗಿರುತ್ತದೆ.
- ಬೆಂಗಳೂರು ನಗರದ ರಸ್ತೆಗಳಲ್ಲಿ ಭಾರೀ ಸರಕು ಸಾಗಣಿ ವಾಹನಗಳಿಂದ ಸಂಚಾರ ಸಮಸ್ಯೆಗಳು ಕಂಡುಬಂದಿದ್ದ ಕಾರಣ ಬೆಂಗಳೂರು ನಗರದ ಪೋಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 11–00 ಗಂಟೆಯಿಂದ ಸಂಜೆ 04–00 ಗಂಟೆಯವರೆಗೆ ಹಾಗೂ ರಾತ್ರಿ 10–00 ಗಂಟೆಯಿಂದ ಬೆಳಿಗ್ಗೆ 07–00 ಗಂಟೆಯವರೆಗೆ ಸಂಚರಿಸುವಂತೆ ಹಾಗೂ ಬೆಳ್ಳಿಗ್ಗೆ 07–00 ಗಂಟೆಯಿಂದ 11–00 ಗಂಟೆಯವರೆಗೆ ಹಾಗೂ ಸಂಜೆ 04–00 ಗಂಟೆಯಿಂದ ರಾತ್ರಿ 10–00 ಗಂಟೆಯವರೆಗೆ ಪೊಲೀಸ್ ಆಯುಕ್ತರ ಸರಹದ್ದಿಗೆ ಒಳಪಡುವ ಎಲ್ಲಾ ರಸ್ತೆಗಳಲ್ಲಿಯೂ ಸರಕು ಸಾಗಣೆ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

- ಪೀಕ್ ಅವರ್ಸ್‌ಗಳಲ್ಲಿ ಬೆಂಗಳೂರು ನಗರದ ಎಲ್ಲಾ ದಟ್ಟಣೆ ಉಂಟಾಗುವ ಜಂಕ್ಷನ್ ಮತ್ತು ರಸ್ತೆಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುತ್ತಾರೆ.
- ಬೆಂಗಳೂರು ನಗರದಾದ್ಯಂತ ಅವೈಜ್ಞಾನಿಕ ಹಾಗೂ ಅನಧಿಕೃತವಾಗಿ ನಿರ್ಮಿಸಲಾಗಿದ್ದ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲು ಬಿ.ಬಿ.ಎಂ.ಪಿ ಪ್ರಮುಖ ರಸ್ತೆಗಳಲ್ಲಿ ವಾಹನದ ವೇಗವನ್ನು ನಿಯಂತ್ರಿಸಿ ಅಪಘಾತಗಳನ್ನು ತಡೆಯುವ ಸಲುವಾಗಿ ಹಾಗೂ ಅವಶ್ಯಕವಿರುವ ಸ್ಥಳಗಳಲ್ಲಿ ಮಾತ್ರವೇ ಐ.ಅರ್.ಸಿ ಮಾದರಿಯಲ್ಲಿ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಲಾಗಿದೆ.
- ಪ್ರತಿ ಸಂಚಾರ ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರತಿ ತಿಂಗಳ ಎರಡನೇ ಶನಿವಾರಗಳಂದು ನಾಗರೀಕ ಸಂಚಾರ ವೇದಿಕೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಆಯಾ ಸಂಚಾರ ಠಾಣಾ ವ್ಯಾಪ್ತಿಯ ನಾಗರೀಕರು ತಮ್ಮ ಸಂಚಾರ ಸಮಸ್ಯೆಗಳನ್ನು ಠಾಣಾ ಮಟ್ಟದಲ್ಲಿ ಪರಿಹರಿಸಿಕೊಳ್ಳುವ ವೇದಿಕೆಯನ್ನು ಸೃಜಿಸಲಾಗಿದೆ.
- ಬೆಂಗಳೂರು ನಗರದಲ್ಲಿ ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸುಗಮ ಸಂಚಾರ ಜಾರಿ ಮಾಡಲು ಮತ್ತು ರಸ್ತೆಯಲ್ಲಿ ಸುರಕ್ಷತೆಯನ್ನು ಜಾರಿ ಮಾಡಲು ಹಲವಾರು ಕ್ರಮಗಳನ್ನು, ಆಂದೋಲನಗಳನ್ನು ಹಾಗೂ ವೃತ್ತಿಪರ ಚಾಲಕರುಗಳಿಗೆ ಹಲವಾರು ತರಬೇತಿ ಹಾಗೂ ರಸ್ತೆ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ರಸ್ತೆ ಸುರಕ್ಷತೆಯನ್ನು ಅತ್ಯುತ್ತಮ ರೀತಿಯಲ್ಲಿ ಜಾರಿ ಮಾಡಲಾಗಿದೆ.
- ಪೀಕ್ ಅವರ್ಸ್‌ಗಳಲ್ಲಿ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ಸಂಚಾರ ನಿರ್ವಹಣೆಯಲ್ಲಿ ತೊಡಗಿಕೊಂಡಿರುವ ಕಾರಣ ಅಂತಹ ಸಂದರ್ಭದಲ್ಲಿ ಕಣ್ಗಾವಲು, ಎನ್‌ಫೋರ್ಸ್‌ಮೆಂಟ್ ಹಾಗೂ ಡಿಜಿಟಲ್ ಕ್ಯಾಮರಾಗಳ ಮೂಲಕ ಉಲ್ಲಂಘನೆ ಎಸಗುವ ವಾಹನಗಳ ಛಾಯಾಚಿತ್ರವನ್ನು ಸೆರೆಹಿಡಿದು ಅವರುಗಳ ವಿರುದ್ಧ ಐ.ಎಂ.ವಿ 133 ನೋಟೀಸ್‌ಗಳನ್ನು ಕಳುಹಿಸಿ ದಂಡ ಪಾವತಿಸಿಕೊಳ್ಳಲಾಗುತ್ತಿದೆ.
- ನಗರದ ರಸ್ತೆಗಳಲ್ಲಿ ಸಂಚಾರ ಸಮಸ್ಯೆಗಳಿಗೆ ಪ್ರಮುಖ ಕಾರಣವಾಗಿರುವ ವಾಹನಗಳ ಅನಧಿಕೃತ, ತಪ್ಪು ನಿಲುಗಡೆ ಹಾಗೂ ಫುಟ್‌ಪಾತ್‌ಮೇಲೆ ವಾಹನ ನಿಲುಗಡೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗಿದೆ.
- ಪಾದಚಾರಿಗಳ ಸುರಕ್ಷತಾ ದೃಷ್ಟಿಯಿಂದ ಜೀಬ್ರಾಕ್ರಾಸಿಂಗ್ ನಿರ್ಮಿಸಿ, ನಿಗದಿತ ಸ್ಥಳದಲ್ಲಿ ಪಾದಚಾರಿಗಳು ರಸ್ತೆಗಳನ್ನು ದಾಟಲು ಅನುವು ಮಾಡಿಕೊಡಲಾಗಿದೆ.
- ಬೆಂಗಳೂರು ನಗರ ರಸ್ತೆಗಳಲ್ಲಿ ಪಥ ಶಿಸ್ತು ನಿಯಮಗಳನ್ನು ಉಲ್ಲಂಘಿಸುವ ವಾಹನ ಚಾಲಕರುಗಳಿಗೆ ಕಠಿಣ ನಿಯಮಗಳ ಜಾರಿಯ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.
- ಸಂಚಾರ ನಿರ್ವಹಣಾ ಕೇಂದ್ರವು (ಟಿಎಂಸಿ) ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಂಗಳೂರು ನಗರದಾದ್ಯಂತ ಅಳವಡಿಸಲಾಗಿರುವ ಕಣ್ಗಾವಲು ಕ್ಯಾಮರಾದ ಮೂಲಕ ಟಿಎಂಸಿಯಲ್ಲಿ ಅಳವಡಿಸಲಾಗಿರುವ ವಿಡಿಯೋವಾಲ್‌ನ ಮುಖಾಂತರ ಸಂಚಾರ ದಟ್ಟಣೆಯನ್ನು ನಿವಾರಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ. ಎರಡು ಪಾಳಿಯಲ್ಲಿ ನಿತ್ಯ ಕ್ಯಾಮರಾ ವೀಕ್ಷಿಸಿ ಜಂಕ್ಷನ್‌ಗಳಲ್ಲಿನ ಸಂಚಾರದ ದಟ್ಟಣೆಯನ್ನು ಪರಿಶೀಲಿಸಿ, ಸಿಗ್ನಲ್ ಲೈಟ್‌ನ ಸಮಯವನ್ನು ಟಿಎಂಸಿಯಿಂದಲೇ ಬದಲಾವಣೆ ಮಾಡುವ ಮೂಲಕ ಸಂಚಾರದ ಒತ್ತಡವನ್ನು ಕಡಿಮೆ ಮಾಡಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಬೆಂಗಳೂರು ನಗರ ಸಂಚಾರ ವಿಭಾಗದ ಪೊಲೀಸ್ ವೆಬ್‌ಸೈಟ್ ಅನ್ನು ಪ್ರತಿನಿತ್ಯ ಸಮಗ್ರ ಮಾಹಿತಿಗಳೊಂದಿಗೆ ಇಲ್ಲಿಯೇ ಅಪ್‌ಡೇಟ್ ಮಾಡಲಾಗುತ್ತಿರುತ್ತದೆ. ಹಾಗೂ ನಗರದಲ್ಲಿ ಅಳವಡಿಸಲಾಗಿರುವ ಸಿಗ್ನಲ್ ಲೈಟ್, ವಿ.ಎಂ.ಎಸ್, ಸರ್ವಿಲನ್ಸ್ ಕ್ಯಾಮರಾ ಇನ್ನಿತರೆ ತಾಂತ್ರಿಕ ಉಪಕರಣಗಳ ನಿಯಂತ್ರಣವನ್ನು ಮಾಡಬಹುದಲ್ಲದೆ, ಸಂದರ್ಭಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡುವ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ.
- ಬೆಂಗಳೂರು ನಗರ ಸಂಚಾರ ಪೊಲೀಸ್ ಘಟಕವು ತಂತ್ರಜ್ಞಾನದ ಬಳಕೆ ಹಾಗೂ ಸಂಯೋಜನೆಗಳನ್ನು ಪೊಲೀಸ್ ಕಾರ್ಯಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳುವ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಅಂತಹ ಹಲವು ತಂತ್ರಜ್ಞಾನಗಳಲ್ಲಿ **ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಐ.ಟಿ.ಎಂ.ಎಸ್)**

ಕೂಡ ಒಂದಾಗಿರುತ್ತದೆ. ಈ ವ್ಯವಸ್ಥೆಯನ್ನು ಡಿಸೆಂಬರ್–2022 ರಿಂದ ನಗರದ ಪ್ರಮುಖ 50 ಜಂಕ್ಷನ್‌ಗಳಲ್ಲಿ ಜಾರಿಗೆ ತರಲಾಗಿದ್ದು, ಒಟ್ಟು 250 ಎ.ಎನ್.ಪಿ.ಆರ್. ಹಾಗೂ 80 ಆರ್.ಎಲ್.ವಿ.ಡಿ ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ. ಈ ವ್ಯವಸ್ಥೆಯು ಸಂಪರ್ಕರಹಿತ ಸ್ವಯಂಚಾಲಿತ ಸಂಚಾರ ಉಲ್ಲಂಘನೆ ಜಾರಿಗಾಗಿ ಇರುವ ಉತ್ತಮ ವ್ಯವಸ್ಥೆಯಾಗಿರುತ್ತದೆ.

- ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಸಾರ್ವಜನಿಕರಿಗೆ ಸಂಚಾರ ದಟ್ಟಣೆ ಉಂಟಾಗಿರುವ ಮಾರ್ಗಗಳ ಬಗ್ಗೆ ಮಾಹಿತಿಯನ್ನು ಬಳಸಬಹುದಾಗ ಪರ್ಯಾಯ ಮಾರ್ಗಗಳ ಕುರಿತು ಮಾಹಿತಿಯನ್ನು ವಿನಿಮಯ ಮಾಡಲಾಗುತ್ತಿರುತ್ತದೆ.
- ದೈನಂದಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಭಿತ್ತಿ ಚಿತ್ರಗಳನ್ನು ಹಾಗೂ ಛಾಯಾ ಚಿತ್ರಗಳನ್ನು ಮುದ್ರಿಸಿ ಮತ್ತು ಆಂದೋಲನಗಳ ಮುಖೇನ ಪಥ ಶಿಸ್ತು ಪಾಲನೆಯ ಗುರಿ ಮತ್ತು ಉದ್ದೇಶಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲಾಗುತ್ತಿದೆ.
- ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರತಿದಿನ ವಿದ್ಯಾರ್ಥಿಗಳು, ಪೋಷಕರು, ಆಟೋರಿಕ್ಷಾ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ಕ್ಯಾಬ್ ಚಾಲಕರುಗಳು ವೀಕ್ಷಣೆಗೆ ಬರುತ್ತಿದ್ದು ಅವರುಗಳಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ವಿಡಿಯೋ ತುಣುಕುಗಳನ್ನು ತೋರಿಸುವುದರ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.
- ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸಲಾಗುತ್ತಿದೆ.
- ನಗರದಲ್ಲಿ ಪ್ರಮುಖ ವೃತ್ತ / ಸ್ಥಳಗಳನ್ನು ಗುರುತಿಸಿ ಅಗತ್ಯವಿರುವ ಒಟ್ಟು 388 ಸ್ಥಳಗಳಲ್ಲಿ ಸಂಚಾರ ಸಿಗ್ನಲ್ ದೀಪಗಳ ಅಳವಡಿಕೆ. 35 ಸ್ಥಳಗಳಲ್ಲಿ ಅಡಾಪ್ಟೀವ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.
- ಸಂಚಾರ ಪೊಲೀಸ್ ಕರ್ತವ್ಯಗಳಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಲು 800ಕ್ಕೂ ಹೆಚ್ಚು ಸ್ವಯಂ ಇಚ್ಛೆಯಿಂದ ಟ್ರಾಫಿಕ್ ವಾರ್ಡನ್‌ಗಳಾಗಿ ಸೇವೆ ಸಲ್ಲಿಸಲು ಮುಂದೆ ಬಂದಿರುವ ಯುವಕರನ್ನು ನೇಮಕಾತಿ ಮಾಡಿಕೊಳ್ಳಲಾಗಿರುತ್ತದೆ.
- **ವಾಹನಗಳ ತೆರವು:** ರಸ್ತೆಯಲ್ಲಿ ವಾರಸುದಾರರಿಲ್ಲದೆ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದ ವಾಹನಗಳನ್ನು ತೆರವುಗೊಳಿಸುವ ಬಿ.ಬಿ.ಎಂ.ಪಿ.ರವರ ಸಹಯೋಗದಿಂದ ಕಾರ್ಯಾಚರಣೆಯನ್ನು ಕೈಗೊಂಡಿರುತ್ತದೆ.

## ಅನುಬಂಧ-2

ಬೆಂಗಳೂರಿನ ಸಂಚಾರ ನಿರ್ವಹಣೆ ಕ್ಷೇತ್ರದಲ್ಲಿ ಹಲವಾರು ಕಾರ್ಯತಂತ್ರದ ಉಪಕ್ರಮಗಳು ಮತ್ತು ಮಧ್ಯಸ್ಥಿಕೆಗಳು ಪ್ರಮುಖ ಪಾತ್ರವನ್ನು ವಹಿಸಿ ಒಟ್ಟಾರೆ ಚಿತ್ರಣವನ್ನು ಬದಲಾಯಿವುಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದೆ.

**ಸಂಚಾರ ನಿರ್ವಹಣೆಯತ್ತ ಕೇಂದ್ರಿತ ವ್ಯವಸ್ಥೆ:**

ಸುಧಾರಿತ ಸಂಚಾರ ನಿರ್ವಹಣೆಯಲ್ಲಿ ಪ್ರಮುಖವಾಗಿ ಗಮನವನ್ನು ವಾಹನಗಳ ಸುಗಮ ಸಂಚಾರಕ್ಕೆ ನೀಡಲಾಗಿದೆಯೇ ಹೊರತು, ಸಂಚಾರ ನಿಯಮ ಉಲ್ಲಂಘನೆಯನ್ನು ದಾಖಲಿಸುವಲ್ಲಿ ಅಲ್ಲ. ನಮ್ಮ ಆದ್ಯತೆಯು ಪ್ರಾಥಮಿಕವಾಗಿ ಸಂಚಾರ ನಿರ್ವಹಣೆಯಾಗಿದ್ದು ಜಂಕ್ಷನ್‌ಗಳಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ /ಸಿಬ್ಬಂದಿಯವರು ಸುಗಮ ಸಂಚಾರ ವ್ಯವಸ್ಥೆಗೆ ಆದ್ಯತೆ ನೀಡಲಾಗುತ್ತಿದೆ.

**ಪೀಕ್ ಅವರ್ ನಿರ್ವಹಣೆ:**

ಪೀಕ್ ಅವರ್ಗಳಲ್ಲಿ ಹೆಚ್ಚಿನ ಸರಕು ವಾಹನ ನಿಷೇಧ ಮತ್ತು ಮಾರ್ಗ ಬದಲಾವಣೆ ತಂತ್ರಗಳನ್ನು ಜಾರಿಗೊಳಿಸಿರುವುದು ಅತ್ಯಂತ ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿದೆ.

**ಉದ್ದೇಶಿತ ದಟ್ಟಣೆಯ ನಿಯಂತ್ರಣಕ್ಕೆ ಕ್ರಮಗಳು:**

ಹೆಬ್ಬಾಳ ಜಂಕ್ಷನ್, ಟಿನ್ ಫ್ಯಾಕ್ಟರಿ, ಗೊರಗುಂಟೆಪಾಳ್ಯ ಮತ್ತು ಸಾರಕ್ಕಿಯಂತಹ ಹೆಚ್ಚು ದಟ್ಟಣೆಯ ಜಂಕ್ಷನ್‌ಗಳನ್ನು ಗುರಿಯಾಗಿಟ್ಟುಕೊಂಡು ಕಾರ್ಯತಂತ್ರದ ಮಧ್ಯಸ್ಥಿಕೆಗಳು ಸ್ಪಷ್ಟವಾದ ಫಲಿತಾಂಶಗಳನ್ನು ನೀಡಿವೆ, ಟ್ರಾಫಿಕ್ ಅಡೆತಡೆಗಳನ್ನು ನಿವಾರಿಸಿವೆ.

**ಮೂಲಸೌಕರ್ಯ ಉನ್ನತೀಕರಣ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ವತಿಯಿಂದ ಕೈಗೊಳ್ಳಲಾದ ರಸ್ತೆ ಮೂಲಸೌಕರ್ಯ ಸುಧಾರಣೆ, ಅದರಲ್ಲೂ ಹೈಡೆನ್ಸಿಟಿ ಕಾರಿಡಾರ್ ರಸ್ತೆಗಳಲ್ಲಿನ ಅಭಿವೃದ್ಧಿಗಳು ಸಂಚಾರದ ಹರಿವನ್ನು ಗಣನೀಯವಾಗಿ ಹೆಚ್ಚಿಸಿದೆ.

**ಸುಗಮ ಸಂಚಾರ ನಿರ್ವಹಣೆಗಾಗಿ ಯೋಜನೆಗಳು:**

ಬೆಂಗಳೂರಿನ ಸಂಚಾರ ನಿರ್ವಹಣಾ ಅಧಿಕಾರಿಗಳು ಸುಗಮ ಸಂಚಾರವನ್ನು ಏರ್ಪಡಿಸಲು ಹಲವಾರು ಉಪಕ್ರಮಗಳನ್ನು ಕೈಗೊಳ್ಳಲು ಸನ್ನದ್ಧರಾಗಿದ್ದಾರೆ:

**ಎಟಿಸಿಎಸ್ ಸಿಗ್ನಲ್‌ಗಳು:**

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆಧಾರಿತ ಟ್ರಾಫಿಕ್ ಸಿಗ್ನಲ್ ಗಳ ಅನುಷ್ಠಾನವು ಅತ್ಯುತ್ತಮ ಸಿಗ್ನಲಿಂಗ್ ಮತ್ತು ಸಂಚಾರದ ಹರಿವನ್ನು ಹೆಚ್ಚು ವ್ಯವಸ್ಥಿತವಾಗಿ ಮಾಡುವ ಭರವಸೆಯನ್ನು ನೀಡುತ್ತದೆ, ಇದು ಸ್ಮಾರ್ಟ್ ಟ್ರಾಫಿಕ್ ನಿರ್ವಹಣೆಯ ಹೊಸ ಯುಗದ ಪ್ರಾರಂಭಕ್ಕೆ ಮುನ್ನುಡಿಯನ್ನು ಬರೆದಿದೆ.

**ತಾಂತ್ರಿಕ ಪ್ರಗತಿಗಳು:**

ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಅನಾಲಿಟಿಕ್ಸ್ ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನಗಳ ಮುಂದುವರಿದ ಬಳಕೆಯು ಭವಿಷ್ಯದ ಉತ್ತಮ ಸಂಚಾರದ ನಿರ್ವಹಣೆಗೆ ಆಧಾರವಾಗಲಿದೆ. ಅಸ್ತ್ರಂ ಎಂಬ ವಿನೂತನ ಉಪಕ್ರಮವು ನಗರದ ಸಂಚಾರದ ಹರಿವಿನ ಬಗ್ಗೆ ಒಳನೋಟವನ್ನು ನೀಡುವ ಸ್ಮಾರ್ಟ್ ಇಂಜಿನ್ ಆಗಿದೆ. ಇದು ಪರಿಣಾಮಕಾರಿಯಾದ ಸಂಚಾರ ನಿರ್ವಹಣೆಗೆ ಲಭ್ಯವಿರುವ ದತ್ತಾಂಶವನ್ನು ಬಳಸಿಕೊಂಡು ಸೂಕ್ತ ಕ್ರಮ ಜರುಗಿಸಿ ಸುಗಮ ಸಂಚಾರ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ. ಇದರಲ್ಲಿ ಮುಖ್ಯವಾಗಿ ಕನ್ಜೆಷನ್ ಅಲರ್ಟ್‌ಗಳು, ಬಿಟಿಪಿ ಆಧಾರಿತ ಇನ್ಸಿಡೆಂಟ್ ರಿಪೋರ್ಟಿಂಗ್ ಹಾಗೂ ಇವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಡ್ಯಾಶ್‌ಬೋರ್ಡ್ ಅನಾಲಿಟಿಕ್ಸ್‌ಗಳನ್ನು ಒಳಗೊಂಡಿದೆ.

**ಕನ್ಜೆಷನ್ ಅಲರ್ಟ್‌ಗಳು:**

ಈ ಉಪಕ್ರಮದಿಂದ ನೈಜಸಮಯದಲ್ಲಿ ಠಾಣೆಯ ಯಾವ ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆಯೆಂಬ ಬಗ್ಗೆ ಠಾಣಾಧಿಕಾರಿಗೆ ಪ್ರತಿ 15 ನಿಮಿಷಕ್ಕೊಮ್ಮೆ ಎಚ್ಚರಿಕೆ ಸಂದೇಶ (ಅಲರ್ಟ್) ಬರುತ್ತದೆ. ಇದನ್ನು ಈ-ಅಟೆಂಡೆನ್ಸ್ ಆ್ಯಪ್‌ನ ಜೊತೆಗೆ ಸಂಯೋಜಿಸಲಾಗಿದ್ದು ಜಂಕ್ಷನ್‌ನಲ್ಲಿರುವ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೂ ಸಹ ಲಭ್ಯವಾಗುವುದರಿಂದ ಸುಗಮ ಸಂಚಾರಕ್ಕೆ ಅನುಕೂಲಕರವಾಗಲಿದೆ.

**ಡ್ಯಾಶ್‌ಬೋರ್ಡ್ ಅನಾಲಿಟಿಕ್ಸ್:**

ಸಂಚಾರದ ಹರಿವಿನ ಬಗ್ಗೆ ಮತ್ತು ರಸ್ತೆ ಸುರಕ್ಷತೆಯ ಬಗ್ಗೆ ಕೈಗೊಳ್ಳಬಹುದಾದ ಅಗತ್ಯ ಮುನ್ನೆಚ್ಚರಿಕೆಯ ಬಗ್ಗೆ ಈ ಉಪಕ್ರಮವು ಸಹಕಾರಿಯಾಗಲಿದೆ. ದಟ್ಟಣೆಯ ಉದ್ದ, ವಾಹನಗಳ ಸಂಖ್ಯೆ, ವಾಹನಗಳ ವಿಧ ಇತ್ಯಾದಿಗಳ ಬಗ್ಗೆ ಇದು ಮಾಹಿತಿಯನ್ನು ನೀಡುವುದರೊಂದಿಗೆ ಪರಿಣಾಮಕಾರಿ ಸಂಚಾರ ನಿರ್ವಹಣೆಗೆ ಸಹಾಯಕವಾಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ದಟ್ಟಣೆ ಬಗ್ಗೆ ಪ್ರಿಡಿಕ್ಟಿವ್ ಅನಾಲಿಸಿಸ್ ಸಹ ಲಭ್ಯವಾಗಲಿದ್ದು ಈ ದತ್ತಾಂಶವು ಸೂಕ್ತ ಸಂಚಾರ ಯೋಜನೆಯನ್ನು ರೂಪಿಸಲು ಸಹಾಯಕವಾಗುತ್ತದೆ.

**ಬಿಓಟಿ ಬಳಕೆ ಮುಖಾಂತರ ಇನ್ಸಿಡೆಂಟ್ ರಿಪೋರ್ಟಿಂಗ್:**

ಇದರ ಬಹುಮುಖ್ಯ ಉದ್ದೇಶವೆಂದರೆ ಅಧಿಕೃತ ಅಧಿಕಾರಿಗಳಿಂದ ರಸ್ತೆಯ ಮೇಲೆ ನಡೆಯುವ ಯಾವುದೇ ಕೃತ್ಯದ ಬಗೆಗೆ ಗೂಗಲ್ ಮ್ಯಾಪ್ ಅಥವಾ ಇನ್ನಿತರ ಮ್ಯಾಪ್‌ಗಳ ಮುಖೇನ ಮಾಹಿತಿಯನ್ನು ರಸ್ತೆ ಬಳಕೆದಾರರಿಗೆ ನೈಜಸಮಯದಲ್ಲಿ ತಲುಪಿಸುವುದು. ಸಂಚಾರ ನಿಯಂತ್ರಣ ಕೇಂದ್ರದಲ್ಲಿ ಇವುಗಳ ಬಗ್ಗೆ ಸತತ ನಿಗಾವಣೆ ಮಾಡಲಾಗುತ್ತದೆ.

**ಇವೆಂಟ್ ಮ್ಯಾನೇಜ್‌ಮೆಂಟ್:**

ನಗರದ ವಿವಿಧ ಪ್ರದೇಶಗಳಲ್ಲಿ ನಡೆಯುವ ಕಾರ್ಯಕ್ರಮಗಳು ಮತ್ತು ಅವುಗಳಿಂದ ಉಂಟಾಗುವ ಸಂಚಾರದ ಹರಿವಿನ ವ್ಯತ್ಯಯ ಅಥವಾ ಸಮಸ್ಯೆಗಳ ಬಗ್ಗೆ ಅರ್ಥೈಸಿಕೊಂಡು ಮುಂದಿನ ದಿನಗಳಲ್ಲಿ ಅವುಗಳನ್ನು ನಿವಾರಿಸುವ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಹಕಾರಿಯಾಗುತ್ತದೆ. ಸಂಚಾರ ನಿಯಂತ್ರಣ ಕೇಂದ್ರದಲ್ಲಿ ಇವುಗಳ ಬಗ್ಗೆ ಸತತ ನಿಗಾವಣೆ ಮಾಡಲಾಗುತ್ತದೆ.

**ಆಂಬುಲೆನ್ಸ್ ಆ್ಯಪ್:**

ಈ ಉಪಕ್ರಮದಿಂದ ನಗರದಲ್ಲಿ ಸಂಚರಿಸುವ ಆಂಬುಲೆನ್ಸ್‌ಗಳ ಸುಗಮ ಸಂಚಾರಕ್ಕೆ ಬಹಳ ಸಹಾಯವಾಗುತ್ತದೆ. ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಆಂಬುಲೆನ್ಸ್‌ಗಳನ್ನು ನೋಂದಾಯಿಸಿಕೊಂಡು ಅವುಗಳು ಪ್ರಯಾಣ ಪ್ರಾರಂಭಿಸುವ ಮತ್ತು ತಲುಪಬೇಕಾದ ಸ್ಥಳಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಸಂಚಾರವನ್ನು ಪರಿಶೀಲಿಸಲಾಗುತ್ತದೆ. 120 ಸೆಕೆಂಡ್‌ಗಳಿಗೆ ಮೀರಿದ ಅವಧಿಯವರೆಗೆ ಯಾವುದೇ ಆಂಬುಲೆನ್ಸ್ ಸಂಚಾರ ದಟ್ಟಣೆಯಲ್ಲಿ ಸಿಕ್ಕಿ ಹಾಕಿಕೊಂಡಲ್ಲಿ ಈ ಆ್ಯಪ್ ಮುಖೇನ SOS ಬಟನ್ ಆ್ಯಕ್ಟಿವೇಟ್ ಆಗಿ ಕೂಡಲೆ ಅತ್ತಕಡೆ ಗಮನಹರಿಸಿ ಸಂಚಾರ ದಟ್ಟಣೆ ನಿವಾರಣೆ ಮಾಡಲು ಮಾಹಿತಿ ರವಾನೆಯಾಗುತ್ತದೆ.

**ಡ್ರೋನ್ ಕ್ಯಾಮೆರಾ:**

ಬೆಂಗಳೂರು ನಗರ ಸಂಚಾರ ವಿಭಾಗವು ಹಾಲಿ 10 ಡ್ರೋನ್ ಕ್ಯಾಮೆರಾಗಳನ್ನು ಬಳಸುತ್ತಿದ್ದು ಬೆಳಗಿನ ಮತ್ತು ಸಂಜೆಯ ಪೀಕ್‌ಅವರ್‌ಗಳ ಸಮಯದಲ್ಲಿ ಸಂಚಾರದ ಹರಿವನ್ನು ನಿಗಾವಣೆ ಮಾಡಲು ಬಳಸಲಾಗುತ್ತಿದೆ. ಈ ಕ್ಯಾಮೆರಾಗಳಿಂದ ಬರುವ ವಿಡಿಯೋಗಳನ್ನು ಸಂಚಾರ ನಿರ್ವಹಣ ಕೇಂದ್ರದಲ್ಲಿ ನೇರಪ್ರಸಾರದಲ್ಲಿ ವೀಕ್ಷಿಸಬಹುದಾಗಿದೆ.

**ಸಹಯೋಗದ ಪ್ರಯತ್ನಗಳು:**

ವಿವಿಧ ಏಜೆನ್ಸಿಗಳು, ಪ್ರಧಾನ ಸಂಶೋಧನಾ ಸಂಸ್ಥೆಗಳು ಮತ್ತು ಎನ್.ಜಿ.ಓ ಗಳೊಂದಿಗಿನ ಸಹಯೋಗಗಳು, ರಸ್ತೆ ಸುರಕ್ಷತಾ ಕ್ರಮಗಳನ್ನು ಹೆಚ್ಚಿಸಲು ಮತ್ತು ಡೇಟಾ-ಚಾಲಿತ ಒಳನೋಟಗಳು ಮತ್ತು ನವೀನ ಪರಿಹಾರಗಳ ಮೂಲಕ ಸಂಚಾರ ಹರಿವನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ.